## ಕರ್ನಾಟಕ ಸರ್ಕಾರ

ಸಂಖ್ಯೆ: STI-TRNG0TRNG/59/2023

ಕರ್ನಾಟಕ ಸರ್ಕಾರ ಸಚಿವಾಲಯ ತರಬೇತಿ ಸಂಸ್ಥೆ
8ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು-560001, ದಿನಾಂಕ: 10.08.2023

### ಅಧಿಕೃತ ಜ್ಞಾಪನ

**ವಿಷಯ**: ಕರ್ನಾಟಕ ಸರ್ಕಾರ ಸಚಿವಾಲಯ/ ಕರ್ನಾಟಕ ವಿಧಾನಸಭೆ/ ವಿಧಾನ ಪರಿಷತ್ತು ಸಚಿವಾಲಯ ಹಾಗೂ ಕರ್ನಾಟಕ ಲೋಕಸೇವಾ ಆಯೋಗದ ಅಧಿಕಾರಿ/ಸಿಬ್ಬಂದಿಗಳಿಗೆ **"ಮಾನಸಿಕ ಆರೋಗ್ಯ ಹಾಗೂ ಒತ್ತಡ ನಿರ್ವಹಣೆ"** ವಿಷಯದ ಕುರಿತು ಕಾರ್ಯಾಗಾರವನ್ನು ಹಮ್ಮಿಕೊಂಡಿರುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರ ಸಚಿವಾಲಯ/ ಕರ್ನಾಟಕ ವಿಧಾನಸಭೆ/ ವಿಧಾನ ಪರಿಷತ್ತು ಸಚಿವಾಲಯ ಹಾಗೂ ಕರ್ನಾಟಕ ಲೋಕಸೇವಾ ಆಯೋಗದ ಅಧಿಕಾರಿ/ಸಿಬ್ಬಂದಿಗಳಿಗೆ **ದಿನಾಂಕ: 23.08.2023 (ಬುಧವಾರ) ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.30 ರವರೆಗೆ (ಅರ್ಧ ದಿನ) "ಮಾನಸಿಕ ಆರೋಗ್ಯ ಹಾಗೂ ಒತ್ತಡ ನಿರ್ವಹಣೆ"** ವಿಷಯದ ಕುರಿತು ತರಬೇತಿ ಕಾರ್ಯಾಗಾರವನ್ನು **ವಿಕಾಸಸೌಧದಲ್ಲಿನ 4ನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ: 419**ರಲ್ಲಿ ಆಯೋಜಿಸಲಾಗಿದೆ. ಸದರಿ ಕಾರ್ಯಾಗಾರಕ್ಕೆ **ಡಾ: ಸಿ.ಆರ್. ಚಂದ್ರಶೇಖರ್, ನಿವೃತ್ತ ಹಿರಿಯ ಪ್ರಾಧ್ಯಾಪಕರು, ಮನೋ ವೈದ್ಯಕೀಯ ವಿಭಾಗ, ನಿಮ್ಹಾನ್ಸ್ ಆಸ್ಪತ್ರೆ, ಬೆಂಗಳೂರು** ರವರು ಆಗಮಿಸಿ, ಉಪನ್ಯಾಸವನ್ನು ನೀಡಲಿದ್ದಾರೆ.

ಸದರಿ ಕಾರ್ಯಾಗಾರಕ್ಕೆ ಆಸಕ್ತಿಯುಳ್ಳ ಕರ್ನಾಟಕ ಸರ್ಕಾರ ಸಚಿವಾಲಯ/ ಕರ್ನಾಟಕ ವಿಧಾನಸಭೆ/ ವಿಧಾನ ಪರಿಷತ್ತು ಸಚಿವಾಲಯ ಹಾಗೂ ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾಗಿ ಇದರ ಸದುಪಯೋಗ ಪಡೆಯುವಂತೆಯು ಹಾಗೂ ಈ ಕಾರ್ಯಾಗಾರಕ್ಕೆ ಹಾಜರಾಗಲು ಆಸಕ್ತಿಯುಳ್ಳ ಅಧಿಕಾರಿ/ಸಿಬ್ಬಂದಿಗಳಿಗೆ ಸಂಬಂಧಪಟ್ಟ ಮೇಲಾಧಿಕಾರಿಗಳು ಅನುವು ಮಾಡಿಕೊಟ್ಟು ಕಾರ್ಯಾಗಾರವನ್ನು ಯಶಸ್ವಿ ಮಾಡಿ ಕೊಡುವಂತೆಯು ಕೋರಲಾಗಿದೆ.

P. Vasavamba 10/08/23

**(ಪಿ.ವಾಸವಾಂಬ)**
ಉಪ ನಿರ್ದೇಶಕರು(ತರಬೇತಿ)
ಸಚಿವಾಲಯ ತರಬೇತಿ ಸಂಸ್ಥೆ

10/8

**ಇವರಿಗೆ:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ರವರ ಆಪ್ತ ಶಾಖೆ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸು ಇಲಾಖೆ(ಆಸು) ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಮುಖ್ಯ ಚುನಾವಣಾಧಿಕಾರಿ, ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು.
4. ಕಾರ್ಯದರ್ಶಿಯವರು, ಕರ್ನಾಟಕ ವಿಧಾನ ಸಭೆ / ವಿಧಾನ ಪರಿಷತ್ತು / ಕರ್ನಾಟಕ ಲೋಕಸೇವಾ ಆಯೋಗ.
5. ಸರ್ಕಾರದ ಉಪ ಕಾರ್ಯದರ್ಶಿ, ಸಿಆಸು ಇಲಾಖೆ(ಲೆಕ್ಕಪತ್ರ) / ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ(ಲೆಕ್ಕಪತ್ರ-1)/(ಲೆಕ್ಕಪತ್ರ-3)/(ಐ.ಆರ್.ಎಲ್.ಎ), ಬೆಂಗಳೂರು.
6. ರಾಜಭವನ, ಬೆಂಗಳೂರು.
7. ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿಗಳ ಕಟ್ಟಡಗಳ ಸೂಚನಾ ಫಲಕಗಳು.
8. ಸಚಿವಾಲಯ ತರಬೇತಿ ಸಂಸ್ಥೆಯ ಸೂಚನಾ ಫಲಕ / ವೆಬ್ ಸೈಟ್ (ಇ-ಆಫೀಸ್ ತಂತ್ರಾಂಶ).